ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:	365
ಸದಸ್ಯರ ಹೆಸರು	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ:	03.02.2021
ಉತ್ತರಿಸುವ ಸಚಿವರು:	ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	2018-19 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಲೆಕ್ಕ ಶೀರ್ಷಿಕೆ 5054-04-337-0-01-154 ರಡಿ ನಾಗಮಂಗಲ ತಾಲ್ಲೂಕಿನ ಕಾಂತಾಪುರ ಮಾರ್ಗ ರಾಜ್ಯ ಹೆದ್ದಾರಿ-19 (ಎನ್.ಹೆಚ್-150ಎ) ಅನ್ನು ಹೊಣಕೆರೆ ಬಳಿ ಸೇರುವ ಜಿಲ್ಲಾ ಮುಖ್ಯ ರಸ್ತೆ ಮತ್ತು ನಾಗಮಂಗಲ ತಾಲ್ಲೂಕು ದೇವಲಾಪುರ-ಮಾರ್ಕೋನಹಳ್ಳಿ ಸೇರುವ ಜಿಲ್ಲಾ ಮುಖ್ಯ ರಸ್ತೆಯ ರಾಜ್ಯ ಹೆದ್ದಾರಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ.750.00 ಲಕ್ಷಗಳಿಗೆ ಕಾಮಗಾರಿ ಮತ್ತು ಕೋಳಾಲ-ತುರುವೇಕೆರೆ-ದಬ್ಬೇಘಟ್ಟ ರಸ್ತೆಯ (ಎಂ.ಡಿ.ಆರ್) ಸರಪಳಿ 0.00 ರಿಂದ 54.00 ಕಿಮೀ.ವರೆಗೆ ಕಾಮಗಾರಿಯನ್ನು ರೂ.1800.00 ಲಕ್ಷಗಳಿಗೆ ಕಾಮಗಾರಿ ಮಂಜೂರಾಗಿ ಪ್ರಸ್ತುತ ಕಾಮಗಾರಿ ಪೂರ್ಣಗೊಳಿಸಬೇಕಾದ ಸಮಯ ಮುಗಿದಿದ್ದರೂ ಇನ್ನೂ ಕಾಮಗಾರಿ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಗಮನಕ್ಕೆ ಬಂದಿದೆ. ನಾಗಮಂಗಲ ತಾಲ್ಲೂಕಿನಲ್ಲಿಯ 1)ಕೋಳಾಲ, ತುರುವೇಕೆರೆ, ದಬ್ಬೆಘಟ್ಟ, ಚಾಮಲಾಪುರ, ಅದ್ದಿಹಳ್ಳಿ, ಕಾಂತಾಪುರ ಮಾರ್ಗ ರಾಜ್ಯಹೆದ್ದಾರಿ 19 (ಎನ್.ಹೆಚ್-150ಎ) ಅನ್ನು ಹೊಣಕೆರೆ ಬಳಿ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ: 1.00 ರಿಂದ 5.50 ಕಿ.ಮೀ. ವರೆಗೆ ಮತ್ತು 2)ದೇವಲಾಪುರ ಮಾರ್ಕೋನಹಳ್ಳಿ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 1.40 ರಿಂದ 5.00 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಪಡಿಸುವ ರೂ.750.0ಲಕ್ಷ ಮೊತ್ತದ ಪ್ಯಾಕೇಜ್ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖಾವತಿಯಿಂದ ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಯನ್ನು ಟೆಂಡರ್ ಕರಾರು ಅನುಸಾರ ದಿನಾಂಕ:14.09.2020 ರಂದು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯನ್ನು ದಿನಾಂಕ:13.03.2021ಕ್ಕೆ ಪೂರ್ಣಗೊಳಿಸ ಬೇಕಾಗಿರುತ್ತದೆ. ಸದರಿ ರಸ್ತೆಯಲ್ಲಿ ಒಟ್ಟು 4.00 ಕಿಮೀ ರಷ್ಟು ವೆಟ್ ಮಿಕ್ಸ್ ಕಾಮಗಾರಿ ಮುಗಿದಿದ್ದು, ಡಾಂಬರೀಕರಣ ಕಾಮಗಾರಿಯನ್ನು ಮಾಡಬೇಕಾಗಿರುತ್ತದೆ. ಮತ್ತು ದೇವಲಾಪುರ-ಮಾರ್ಕೋನಹಳ್ಳಿ ರಸ್ತೆಯಲ್ಲಿ ಕಾಂಕ್ರೀಟ್ ಚರಂಡಿ ಕಾಮಗಾರಿ ಮುಗಿದಿದ್ದು, ಜಿ.ಎಸ್.ಬಿ ಕಾಮಗಾರಿಯು ಬಾಕಿ ಇರುತ್ತದೆ. ಕೋವಿಡ್-19 ರ ಹಿನ್ನಲೆಯಲ್ಲಿ ಕೆಲಸಗಾರರ ಕೊರತೆಯಿಂದಾಗಿ ಕಾಮಗಾರಿ ಪ್ರಗತಿ ತುಸು ಕುಂಠಿತವಾಗಿರುತ್ತದೆ. ಕುಂಠಿತ ಪ್ರಗತಿಯ ಬಗ್ಗೆ ಗುತ್ತಿಗೆದಾರರಿಗೆ ಉಪವಿಭಾಗ ಕಛೇರಿಯಿಂದ ಸದರಿ ಕಾಮಗಾರಿಗಳನ್ನು ಜರೂರು ಪೂರ್ಣಗೊಳಿಸುವಂತೆ ನೋಟೀಸ್ ನೀಡಲಾಗಿರುತ್ತದೆ. ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೊಂಡು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಕೋಳಾಲ-ತುರುವೇಕೆರೆ-ದಬ್ಬೇಘಟ್ಟ ರಸ್ತೆಯ

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
		(ಎಂ.ಡಿ.ಆರ್) ಸರಪಳಿ 0.00 ರಿಂದ 54.00 ಕಿಮೀ.ವರೆಗೆ (ಆಯ್ದ ಭಾಗಗಳನ್ನು) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 (ಘಟ್ಟ-1)ರ ಪ್ಯಾಕೇಜ್ 329(ಬಿ) ರಡಿ ರೂ.1658.53 ಲಕ್ಷಗಳ ಅಂದಾಜು ಮೊತ್ತದ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಗುತ್ತಿಗೆ ಮೂಲಕ ಗುತ್ತಿಗೆದಾರರಾದ ಶ್ರೀ ಹೆಚ್.ಬಿ. ರವಿಕುಮಾರ್‌ರವರಿಗೆ ಟೆಂಡರ್ ಮೂಲಕ ವಹಿಸಲಾಗಿದೆ. ಗುತ್ತಿಗೆ ಕರಾರಿನನ್ವಯ ಗುತ್ತಿಗೆದಾರರಿಗೆ ಒಟ್ಟು 11 ತಿಂಗಳ ಕಾಲಾವಧಿಯನ್ನು ನಿಗಧಿಪಡಿಸಿದ್ದು, ದಿನಾಂಕ:11-06-2020ರೊಳಗೆ ಪೂರ್ಣಗೊಳಿಸಬೇಕಿತ್ತು. ಆದರೆ ಕೋವಿಡ್-19ರ ಲಾಕ್‌ಡೌನ್ ಪರಿಣಾಮದಿಂದಾಗಿ ಕಾಮಗಾರಿಗಳು ವಿಳಂಬವಾಗಿದ್ದು, ಕಾಲಾವಧಿ ವಿಸ್ತರಣೆ ನೀಡಬೇಕಾಗಿರುತ್ತದೆ. ಗುತ್ತಿಗೆದಾರರು ವಿಸ್ತರಿತ ಕಾಲಾವಧಿಯಲ್ಲಿಯೂ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಗುತ್ತಿಗೆ ಕರಾರಿನ ವಿಧಿ 49 ರನ್ವಯ ಕ್ರಮ ಕೈಗೊಳ್ಳಲಾಗುವುದು.
ಆ	ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದ್ದು ಅಂದಾಜು ಪಟ್ಟಿಯಲ್ಲಿರುವಂತೆ ಕಾಮಗಾರಿ ಪೂರೈಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಗುಣ ಮಟ್ಟ ಪರಿಶೀಲಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು (ವಿವರ ನೀಡುವುದು)	ಸದರಿ ಕಾಮಗಾರಿಗಳನ್ನು ಮಂಜೂರಾದ ಅಂದಾಜಿನಲ್ಲಿರುವಂತೆ ನಿರ್ವಹಿಸುತ್ತಿದ್ದು, ಕಾಮಗಾರಿಯ ಪ್ರತಿ ಹಂತದಲ್ಲೂ ಗುಣ ಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತಿದೆ.
ಇ.	ಕಾಮಗಾರಿ ವಿಳಂಬದಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ದಿನನಿತ್ಯ ತಾಲ್ಲೂಕು ಕೇಂದ್ರಕ್ಕೆ ಓಡಾಡಲು ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ತುರ್ತು ಕಾಮಗಾರಿಯನ್ನು ಗುಣಮಟ್ಟದಿಂದ ಪೂರ್ಣಗೊಳಿಸುವುದು ಯಾವಾಗ: (ವಿವರ ನೀಡುವುದು)	
ಈ.	ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಇಲಾಖಾ ಅಧಿಕಾರಿಗಳ ವಿರುದ್ಧ ಯಾವ ಶಿಸ್ತು ಕ್ರಮಕೈಗೊಳ್ಳಲಾಗಿದೆ (ವಿವರ ನೀಡುವುದು)?	

ಲೋಇ 18 ಸಿಕ್ಯೂಎನ್ 2021(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ